

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬದ್ರ್ ಯುದ್ಧಾನಂತರದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–11–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಬದ್ರ್ ಯುದ್ಧದ ತಕ್ಷಣ ನಂತರದ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೆ. ಈ ಸಂಬಂಧವಾಗಿ ಹಿಜರೀ 2ರ ಘಟನೆಗಳಲ್ಲಿ ಒಂದು, ಜನ್ನತುಲ್ ಬಖೀಯ ಸ್ಥಾಪನೆಯ ಪ್ರಸ್ತಾಪವಾಗಿದೆ. ಇದರ ವಿವರಣೆ ಹೀಗಿದೆ: ಮದೀನ ಮುನವ್ವರದಲ್ಲಿ ಯಹೂದಿಯರು ಮತ್ತು ಇತರ ಎಲ್ಲ ಗೋತ್ರಗಳಿಗೆ ತಮ್ಮ ತಮ್ಮ ಖಬರ್‌ಸ್ತಾನವಿತ್ತು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲುಪಿದಾಗ ಮುಸ್ಲಿಮರಿಗಾಗಿ ಪ್ರತ್ಯೇಕ ಖಬರ್‌ಸ್ತಾನದ ಅಗತ್ಯ ಕಂಡುಬಂತು. ಹೀಗೆ ಬಖೀಉಲ್‌ಗ಼ರ್‌ಖದ್ ಎಂಬ ಸ್ಥಳವನ್ನು ಮುಸ್ಲಿಮರಿಗೆ ಖಬರ್‌ಸ್ತಾನವಾಗಿ ಆಯ್ಕೆ ಮಾಡಲಾಯಿತು. ಹೇರಳವಾಗಿ ಮರಗಳು ಇರುವ ಪ್ರದೇಶವನ್ನು ಅರಬಿ ಭಾಷೆಯಲ್ಲಿ ಬಖೀ ಎಂದು ಹೇಳಲಾಗುತ್ತದೆ. ಈ ಖಬರ್‌ಸ್ತಾನವನ್ನು ಜನ್ನತುಲ್‌ಬಖೀ ಎಂದೂ ಕರೆಯಲಾಗುತ್ತದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಿಜರೀ 2ರಲ್ಲಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರಿಗಾಗಿ ಒಂದು ಖಬರಸ್ತಾನವನ್ನು ಆಯ್ಕೆ ಮಾಡಿದರು. ಅದನ್ನು ಜನ್ನತುಲ್ ಬಖೀ ಎಂದು ಹೇಳಲಾಗುತ್ತದೆ. ಈ ಖಬರ್‌ಸ್ತಾನದಲ್ಲಿ ಮೊತ್ತಮೊದಲಾಗಿ ಉಸ್ಮಾನ್ ಬಿನ್ ಮಝ್‌ಊನ್(ರ) ದಫನ್ ಮಾಡಲ್ಪಟ್ಟಿದ್ದರು. ಅವರು ಅತ್ಯಂತ ಸಾತ್ವಿಕ, ಆರಾಧಕ ಮತ್ತು ಸಂತರಾದ ವ್ಯಕ್ತಿಯಾಗಿದ್ದರು. ಮುಸ್ಲಿಮರಾದ ನಂತರ ಲೋಕದಿಂದ ವಿರಕ್ತರಾಗಿಕೊಂಡು ಪತ್ನಿ ಮಕ್ಕಳಿಂದ ಬೇರ್ಪಟ್ಟು ತಮ್ಮ ಜೀವಿತವನ್ನು ದೇವಾರಾಧನೆಗಾಗಿ ಮಾತ್ರ ಮುಡಿಪಾಗಿಡಲು ಹಝ್ರತ್ ಪೈಗಂಬರ್(ಸ)ರೊಡನೆ ಅವರು ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ದೇವನಿಗೆ ಸಲ್ಲಬೇಕಾದ ಹಕ್ಕನ್ನು ನೀವು ದೇವನಿಗೆ ಸಲ್ಲಿಸಿರಿ; ಪತ್ನಿ–ಮಕ್ಕಳಿಗೆ ಕೊಡಬೇಕಾದ ಹಕ್ಕನ್ನು ಪತ್ನಿ–ಮಕ್ಕಳಿಗೆ ಕೊಡಿರಿ; ಅತಿಥಿಗಳಿಗೆ ಕೊಡಬೇಕಾದ ಹಕ್ಕನ್ನು ಅತಿಥಿಗಳಿಗೆ ಕೊಡಿರಿ ಮತ್ತು ಸ್ವಂತಕ್ಕೆ ನೀಡಬೇಕಾದ ಹಕ್ಕನ್ನು ಸ್ವಂತಕ್ಕೆ ನೀಡಿರಿ. ಏಕೆಂದರೆ ಈ ಎಲ್ಲ ಹಕ್ಕುಗಳು ಅಲ್ಲಾಹನು ನಿಶ್ಚಯಿಸಿದ್ದಾಗಿವೆ. ಅವುಗಳನ್ನು ಈಡೇರಿಸುವುದು ಆರಾಧನೆಯಲ್ಲಿ ಒಳಪಡುವುದು. ಒಟ್ಟಿನಲ್ಲಿ, ಲೋಕದಿಂದ ವಿರಕ್ತನಾಗಲು ಹಝ್ರತ್ ಪೈಗಂಬರ್(ಸ) ಉಸ್ಮಾನ್ ಬಿನ್ ಮಝ್‌ಊನ್(ರ)ರಿಗೆ ಅನುಮತಿ ನೀಡಲಿಲ್ಲ. ಆ ಮೂಲಕ ಹಝ್ರತ್ ಪೈಗಂಬರ್(ಸ) ಇಸ್ಲಾಮಿನಲ್ಲಿ ಸನ್ಯಾಸವನ್ನು ನಿಷಿದ್ಧಗೊಳಿಸಿಕೊಂಡು ತನ್ನ ಸಮುದಾಯದಲ್ಲಿ ಎರಡು ಎಲ್ಲೆಗಳ ನಡುವೆ ಮಧ್ಯಮ ಮಾರ್ಗವನ್ನು ಸ್ಥಾಪಿಸಿದರು. ಉಸ್ಮಾನ್ ಬಿನ್ ಮಝ್‌ಊನ್(ರ)ರ ನಿಧನ ಹಝ್ರತ್ ಪೈಗಂಬರ್(ಸ)ರನ್ನು ಬಹಳವಾಗಿ ದುಃಖಕ್ಕೀಡು ಮಾಡಿತು. ಅವರು ನಿಧನಗೊಂಡಾಗ ಹಝ್ರತ್ ಪೈಗಂಬರ್(ಸ) ಅವರ ಹಣೆಯನ್ನು ಚುಂಬಿಸಿದರು ಎಂದೂ ಆ ವೇಳೆ ಹಝ್ರತ್ ಪೈಗಂಬರ್(ಸ)ರ ಕಣ್ಣುಗಳು ತೇವಗೊಂಡುವು ಎಂದೂ ವರದಿಯಲ್ಲಿ ಬಂದಿದೆ.

(ಹುಝೂರ್ ಹೇಳಿದರು:) ಈಗ ನಾನು ಬನೀ ಗ಼ತ್‌ಫಾನ್ ಯುದ್ಧದ ಕುರಿತು ಪ್ರಸ್ತಾಪಿಸುವೆನು. ಗ಼ತ್‌ಫಾನಿನ ಶಾಖೆಯಾದ ಬನೀ ಸಅ್‌ಲಬ ಮತ್ತು ಬನೂ ಮುಹಾರಿಬ್ ಮುಸ್ಲಿಮರ ವಿರುದ್ಧ ಒಂದು ಜಾಗದಲ್ಲಿ ಒಟ್ಟುಗೂಡುತ್ತಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಈ ಮಾಹಿತಿ ಲಭಿಸಿದಾಗ ಹಝ್ರತ್ ಪೈಗಂಬರ್(ಸ) 450 ಸಹಾಬಿಯರ ಜೊತೆಗೆ ಹೊರಟರು. ಹಿಜರೀ 3ರ ರಬೀಉಲ್ ಅವ್ವಲ್ ತಿಂಗಳಲ್ಲಿ ಈ ಯುದ್ಧ ನಡೆಯಿತು. ಮುಶ್ರಿಕರ ಒಕ್ಕೂಟದ ವಿರುದ್ಧವಾಗಿ ಹಝ್ರತ್ ಪೈಗಂಬರ್(ಸ) ಹೊರಟಾಗ ಮಾರ್ಗ ಮಧ್ಯೆ ಬನೂ ಗ಼ತ್‌ಫಾನಿನ ಒಬ್ಬ ವ್ಯಕ್ತಿಯ ಭೇಟಿಯಾಯಿತು. ಆತನನ್ನು ಬಂಧಿಸಿ ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಮುಂದೆ ತಂದರು. ಆತನು ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಗೋತ್ರದ ಚಟುವಟಿಕೆಗಳ ಕುರಿತು ತಿಳಿಸಿದನು. ಹಝ್ರತ್ ಪೈಗಂಬರ್(ಸ) ಆತನಿಗೆ ಇಸ್ಲಾಮಿನ ಸಂದೇಶದ ಬಗ್ಗೆ ಹೇಳಿಕೊಟ್ಟಾಗ, ಆತನು ತಕ್ಷಣವೇ ಮುಸ್ಲಿಮನಾದನು. ಆತನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ನೀವು ಮತ್ತು ಮುಸ್ಲಿಮರ ಸೈನ್ಯ ಆ ಕಡೆಗೆ ಬರುವುದಾಗಿ ನಮ್ಮ ಸಮುದಾಯಕ್ಕೆ ಗೊತ್ತಾದರೆ, ಅವರು ಎಂದಿಗೂ ನಿಮ್ಮ ವಿರುದ್ಧ ಹೋರಾಡಲಾರರು. ಬದಲಾಗಿ ಆಸುಪಾಸಿನ ಪರ್ವತಗಳನ್ನು ಏರುವರು. ಹೀಗೆ ಮುಸ್ಲಿಮರು ಅವರ ಕಡೆಗೆ ಹೊರಟಾಗ, ನಿಜವಾಗಿಯೂ ಅವರು ಹೋರಾಟ ನಡೆಸಲಿಲ್ಲ. ಬದಲಾಗಿ ಸುತ್ತಮುತ್ತಲಿನ ಪರ್ವತಗಳನ್ನು ಏರಿದರು. ಇದೇ ಸಂದರ್ಭದಲ್ಲಿ ಪ್ರಸಿದ್ಧವಾದ ಆ ಘಟನೆ ನಡೆಯಿತು. ಅದೇನೆಂದರೆ, ಹಝ್ರತ್ ಪೈಗಂಬರ್(ಸ) ಒಂದು ಮರದ ನೆರಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಸಹಾಬಿಯರು ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಅಷ್ಟರಲ್ಲಿ ಒಬ್ಬ ವ್ಯಕ್ತಿ ಹಠಾತ್ ಹಝ್ರತ್ ಪೈಗಂಬರ್(ಸ) ಮುಂದೆ ಖಡ್ಗವೆತ್ತಿ ನಿಂತನು. ಆತನು ಕೇಳಿದನು: ಹೇ ಮುಹಮ್ಮದ್, ಈಗ ನಿನ್ನನ್ನು ನನ್ನಿಂದ ರಕ್ಷಿಸಬಲ್ಲವರು ಯಾರು? ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು. ಇದನ್ನು ಆಲಿಸಿದಾಗ ಆತನ ಕೈಯಿಂದ ಖಡ್ಗ ಕೆಳಗೆ ಬಿತ್ತು.

ಈ ಯುದ್ಧದ ಘಟನೆಗಳಲ್ಲಿ ಹಝ್ರತ್ ರುಖಿಯ(ರ)ರ ನಿಧನ ಮತ್ತು ಹಝ್ರತ್ ಉಮ್ಮು ಕುಲ್‌ಸುಮ್(ರ)ರ ವಿವಾಹದ ಘಟನೆಗಳು ಸಹ ಇವೆ. ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧಕ್ಕಾಗಿ ಹೊರಡುವಾಗ ಹಝ್ರತ್ ರುಖಿಯ(ರ) ರೋಗಿಯಾಗಿದ್ದರು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್(ರ)ರನ್ನು ಹಝ್ರತ್ ರುಖಿಯ(ರ)ರ ಉಪಚಾರಕ್ಕಾಗಿ ಮದೀನದಲ್ಲೇ ಬಿಟ್ಟು ಬಂದಿದ್ದರು. ಹಝ್ರತ್ ಝೈದ್ ಬಿನ್ ಹಾರಿಸ(ರ) ಬದ್ರ್ ಯುದ್ಧದ ವಿಜಯ

ಸುವಾರ್ತೆಯನ್ನು ಮದೀನಕ್ಕೆ ಮುಟ್ಟಿಸಿದ ದಿನದಂದೇ ಹಝ್ರತ್ ರುಖಿಯ(ರ) ನಿಧನಗೊಂಡರು. ಹಝ್ರತ್ ರುಖಿಯ(ರ)ರ ನಿಧನದ ನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್(ರ)ರನ್ನು ಭೇಟಿಯಾಗಿ ಹೀಗೆ ಹೇಳಿದರು: ಅಲ್ಲಾಹನು ಉಮ್ಮು ಕುಲ್ಸುಮ್‌ಳ ನಿಕಾಹನ್ನು ನಿಮ್ಮೊಂದಿಗೆ ರುಖಿಯಳಿಗೆ ಕೊಟ್ಟಷ್ಟೇ ಹಕ್ ಮಹರ್‌ನೊಂದಿಗೆ ಮತ್ತು ಅವಳೊಂದಿಗೆ ಉತ್ತಮವಾಗಿ ವರ್ತಿಸುತ್ತೀರಿ ಎಂಬ ನಿಬಂಧನೆಯೊಂದಿಗೆ ಮಾಡಿಸಿರುವನು. ವಿವಾಹದ ಮೂರು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಉಮ್ಮು ಕುಲ್ಸುಮ್(ರ)ರ ಬಳಿಗೆ ಹೋಗಿ ಹೀಗೆ ಕೇಳಿದರು: ಎಲೈ ನನ್ನ ಪುತ್ರೀ, ನಿನ್ನ ಪತಿ ಹೇಗಿರುವರು? ಆಗ ಉಮ್ಮು ಕುಲ್ಸುಮ್(ರ) ಹೇಳಿದರು: ಉಸ್ಮಾನ್ ಅತ್ಯುತ್ತಮ ಪತಿಯಾಗಿರುವರು. ಹಝ್ರತ್ ಉಮ್ಮು ಕುಲ್ಸುಮ್(ರ) ಹಿಜರೀ 9ರಲ್ಲಿ ರೋಗಿಯಾಗಿ ನಿಧನಗೊಂಡಿದ್ದರು. ಹಝ್ರತ್ ಉಮ್ಮು ಕುಲ್ಸುಮ್(ರ) ನಿಧನಗೊಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಮೂರನೇ ಪುತ್ರಿ ಇರುತ್ತಿದ್ದರೆ, ಅವಳ ವಿವಾಹವನ್ನು ಕೂಡ ನಾನು ಉಸ್ಮಾನ್(ರ)ರೊಂದಿಗೆ ಮಾಡಿಸುತ್ತಿದ್ದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹಝ್ರತ್ ಉಮ್ಮು ಕುಲ್‌ಸುಮ್(ರ)ರ ವಿವಾಹದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಪುತ್ರಿಯೂ ಹಝ್ರತ್ ಉಸ್ಮಾನ್(ರ) ಪತ್ನಿಯೂ ಆದ ಹಝ್ರತ್ ರುಖಿಯ(ರ)ರ ನಿಧನದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಎರಡನೇ ಪುತ್ರಿಯಾದ ಉಮ್ಮೇ ಕುಲ್ಸುಮ್(ರ)ರ ವಿವಾಹವನ್ನು ಹಝ್ರತ್ ಉಸ್ಮಾನ್(ರ)ರೊಂದಿಗೆ ಮಾಡಿಸಿದರು. ಅವರು ಹಝ್ರತ್ ಫಾತಿಮ(ರ)ರಿಗಿಂತ ಹಿರಿಯರೂ ಮತ್ತು ಹಝ್ರತ್ ರುಖಿಯ(ರ)ರಿಗಿಂತ ಕಿರಿಯರೂ ಆಗಿದ್ದರು. ಇದೇ ಕಾರಣದಿಂದ ಹಝ್ರತ್ ಉಸ್ಮಾನ್(ರ)ರನ್ನು **ಧುನ್ನೂರೈನ್** ಎಂದು ಕರೆಯಲಾಗುತ್ತದೆ. ಎಂದರೆ ಎರಡು ಪ್ರಕಾಶಗಳು ಹೊಂದಿರುವ ವ್ಯಕ್ತಿ. ಹಝ್ರತ್ ಉಮ್ಮು ಕುಲ್ಸುಮ್(ರ)ರ ವಿವಾಹ ಹಿಜರೀ 3, ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆದಿತ್ತು. ಇದು ಹಝ್ರತ್ ಉಮ್ಮು ಕುಲ್ಸುಮ್(ರ)ರ ಎರಡನೇ ನಿಕಾಹ್ ಆಗಿತ್ತು. ಇದಕ್ಕಿಂತ ಮೊದಲು ಹಝ್ರತ್ ರುಖಿಯ(ರ)ರ ಮತ್ತು ಹಝ್ರತ್ ಉಮ್ಮು ಕುಲ್ಸುಮ್(ರ)ರ ನಿಕಾಹ್ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರಾದ ಅಬೂಲಹಬ್‌ರ ಇಬ್ಬರು ಪುತ್ರರ ಜೊತೆಗೆ ನಡೆದಿತ್ತು. ಆದರೆ ವಿವಾಹದ ಮೊದಲೇ ಧಾರ್ಮಿಕ ವ್ಯತ್ಯಾಸದ ಕಾರಣದಿಂದ ಆ ನಿಕಾಹ್ ಕೊನೆಗೊಂಡಿತು.

ಆ ಕಾಲಘಟ್ಟದ ಘಟನೆಗಳಲ್ಲಿ ಬನೂಸುಲೈಮ್ ಯುದ್ಧದ ಪ್ರಸ್ತಾಪ ಸಹ ಇದೆ. ಬನೂ ಸುಲೈಮ್ ಗೋತ್ರದ ಒಂದು ದೊಡ್ಡ ಸಂಘ ಮುಸ್ಲಿಮರ ವಿರುದ್ಧ ಒಟ್ಟು ಸೇರಿದ್ದಾಗಿ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಆಗ ಹಝ್ರತ್ ಪೈಗಂಬರ್(ಸ) ಅಬ್ದುಲ್ಲಾಹ್ ಬಿನ್ ಉಮ್ಮು ಮಕ್ತೂಮ್(ರ)ರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ನಿಶ್ಚಯಿಸಿ ಮುನ್ನೂರು ಸಹಾಬಿಯರ ಜೊತೆಗೆ ಜಮಾದಿಯುಲ್ ಊಲ ಆರರಲ್ಲಿ ಹೊರಟರು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದ್ದರು ಎಂದಿದೆ. ಮಾರ್ಗ ಮಧ್ಯೆ ಹಝ್ರತ್ ಪೈಗಂಬರ್(ಸ) ಬನೂ ಸುಲೈಮಿನ ಒಬ್ಬ ವ್ಯಕ್ತಿಯನ್ನು ಭೇಟಿಯಾದರು. ಬನೂ ಸುಲೈಮಿನ ಸಂಘ ಚದುರಿ ಹೋಯಿತು ಎಂದು ಆತನು ತಿಳಿಸಿದನು. ಆತನು ನೀಡಿದ ಮಾಹಿತಿ ಸರಿಯೆಂದು ತನಿಖೆ ನಡೆಸಿದಾಗ ತಿಳಿದುಬಂತು. ಹೀಗೆ ಹಝ್ರತ್ ಪೈಗಂಬರ್(ಸ) ಮರಳಿಹೋದರು. ಯುದ್ಧ ನಡೆಸಬೇಕಾಗಿ ಬರಲಿಲ್ಲ.

ಮತ್ತೊಂದು ಝೈದ್ ಬಿನ್ ಹಾರಿಸರ ಕಾರ್ಯಾಚರಣೆಯಾಗಿದೆ. ಇದರ ವಿವರಣೆಯ ಬಗ್ಗೆ ಹೀಗೆ ಪ್ರಸ್ತಾಪ ಬರುತ್ತದೆ. 'ನಮ್ಮ ವ್ಯಾಪಾರ ಕೇಂದ್ರವಾದ ಸಿರಿಯ ತನಕ ಹೋಗುವುದನ್ನು ಮುಸ್ಲಿಮರು ತಡೆದಿರುವರು' ಎಂದು ಸಫ್‌ವಾನ್ ಬಿನ್ ಉಮಯ್ಯ ತಮ್ಮ ಸಂಗಡಿಗರೊಡನೆ ಒಮ್ಮೆ ಹೇಳಿದನು. 'ಸಮುದ್ರ ತೀರದ ಮಾರ್ಗವನ್ನು ಬಿಟ್ಟು ಇರಾಕಿನ ಕಡೆಯಿಂದ ಸಿರಿಯಗೆ ಹೋಗಬಹುದು' ಎಂದು ಒಬ್ಬ ವ್ಯಕ್ತಿ ಸಲಹೆ ನೀಡಿದನು. ಹೀಗೆ ರಸ್ತೆ ಗೊತ್ತಿರುವ ಒಬ್ಬ ವ್ಯಕ್ತಿಯ ಸಹಾಯದಿಂದ ಸಫ್‌ವಾನ್ ಬಿನ್ ಉಮಯ್ಯ ಹೊರಡಲು ತೀರ್ಮಾನಿಸಿ ವ್ಯಾಪಾರ ತಂಡದ ತಯಾರಿ ಶುರು ಮಾಡಿದನು. ಈ ಕಾರ್ಯಾಚರಣೆ ಜಮಾದಿಲ್ ಆಖಿರ್ ಹಿಜರಿ 3ರಲ್ಲಿ ನಡೆದಿತ್ತು. ವ್ಯಾಪಾರ ತಂಡ ಹೊರಟ ಸುದ್ದಿ ಯಾವ ರೀತಿಯಲ್ಲೂ ಮದೀನಕ್ಕೆ ತಲುಪದಿರಲು ವ್ಯಾಪಾರ ತಂಡದವರು ಪೂರ್ಣ ಪ್ರಯತ್ನ ಮಾಡಿದ್ದರು. ಆದರೆ ಅಲ್ಲಾಹನ ಇಚ್ಛೆ ಬೇರೆಯೇ ಆಗಿತ್ತು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿತು. ಹಝ್ರತ್ ಪೈಗಂಬರ್(ಸ) ನೂರು ಕುದುರೆಸವಾರರನ್ನು ಹಝ್ರತ್ ಝೈದ್ ಬಿನ್ ಹಾರಿಸ(ರ)ರ ನೇತೃತ್ವದಲ್ಲಿ ಕಳುಹಿಸಿದರು. ಅಮೀರ್ ಎಂಬ ನೆಲೆಯಲ್ಲಿ ಇದು ಹಝ್ರತ್ ಝೈದ್(ರ)ರ ಮೊದಲ ಕಾರ್ಯಾಚರಣೆಯಾಗಿತ್ತು. ಅದರಲ್ಲಿ ಅವರು ಯಶಸ್ವಿಯಾಗಿ ಮರಳಿದರು.

(ಹುಝೂರ್ ಹೇಳಿದರು:) ಈ ವ್ಯಾಪಾರ ತಂಡಗಳನ್ನು ತಡೆಯಲು ಕಾರಣವೇನೆಂದರೆ, ಈ ವ್ಯಾಪಾರ ತಂಡಗಳಿಂದ ಲಭಿಸುವ ಲಾಭವನ್ನು ಮುಸ್ಲಿಮರ ವಿರುದ್ಧ ಯುದ್ಧ ನಡೆಸಲು ಉಪಯೋಗಿಸಲಾಗುತ್ತಿತ್ತು. ಇಂದಿನ ಕಾಲದಲ್ಲಿ ಕೆಲವು ದೇಶಗಳ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಲಾಗುತ್ತವೆ. ಆ ತಂಡಗಳನ್ನು ತಡೆಯುವುದು ಸಹ ಅದೇ ರೀತಿಯ ಒಂದು ಕ್ರಮವಾಗಿತ್ತು. ಇಂದಿನ ಕಾಲದಲ್ಲಿ ಕೆಲವೊಮ್ಮೆ ಈ ದೇಶಗಳು ಅಕ್ರಮವಾಗಿಯೂ ನಿರ್ಬಂಧ ಹೇರುತ್ತಾರೆ. ಹೀಗಿರುವಾಗ ಅಂಥವರು ಇಸ್ಲಾಮಿನ ಮೇಲೆ ಹೇಗೆ ಆಕ್ಷೇಪ ಎತ್ತಲು ಸಾಧ್ಯ?

ಖುತ್ಬದ ಎರಡನೇ ಭಾಗದಲ್ಲಿ ಹುಝೂರ್ ಹೇಳಿದರು: ಈಗ ನಾನು ಪೆಲಸ್ತೀನಿಗಾಗಿ ದುಆ ಮಾಡಲು ಪುನಃ ಮನವಿ ಮಾಡುತ್ತೇನೆ. ಈಗ ಕನಿಷ್ಠ ಪಕ್ಷ ಕೆಲವು ಜನರು ಹೆದರಿಕೊಂಡಾದರೂ ಈ ದೌರ್ಜನ್ಯದ ವಿರುದ್ಧ ಮಾತನಾಡಲು ಆರಂಭಿಸಿದ್ದಾರೆ. ಈಗಂತು ಕೆಲವು ಯಹೂದಿಯರು ಕೂಡ ಈ ದೌರ್ಜನ್ಯದ ವಿರುದ್ಧ ದನಿಯೆತ್ತಿರುವರು. ನಮಗೂ ಕೂಡ ಕೆಟ್ಟ ಹೆಸರು ಏಕೆ ತರುತ್ತೀರಿ ಎಂದು ತನ್ನ ಸರ್ಕಾರದೊಂದಿಗೆ ಅವರು ಕೇಳಿರುವರು. ಹೇಗಿದ್ದರೂ ಸಣ್ಣ ಸಣ್ಣ ದನಿಗಳು ಏಳಲು ಆರಂಭಿಸಿವೆ. ಪೆಲಸ್ತೀನಿಯರಿಗೆ ನೆರವು ಲಭಿಸಲಿಕ್ಕಾಗಿ ದಿನಾಲೂ ನಾಲ್ಕು ಗಂಟೆಗಳ ಕಾಲ ಯುದ್ಧವನ್ನು ತಡೆಯಲಾಗುವುದು ಎಂದು ಹೇಳಲಾಗುತ್ತಿದೆ. ಇದರ ಪ್ರಕಾರ ಎಷ್ಟರ ಮಟ್ಟಿಗೆ ನಡೆಯುವರು ಎಂದೂ ಉಳಿದ 20 ಗಂಟೆಗಳಲ್ಲಿ ಎಷ್ಟು ಬಾಂಬ್‌ಗಳನ್ನು ವರ್ಷಿಸುವರು ಎಂದೂ ಅಲ್ಲಾಹನೇ ಬಲ್ಲನು. ಹೆಚ್ಚಿನ ದೊಡ್ಡ ಸರ್ಕಾರಗಳು ಮತ್ತು ರಾಜಕರಣಿಗಳು ಕೂಡ ಪೆಲಸ್ತೀನಿಯರ ಜೀವಕ್ಕೆ ಯಾವುದೇ ಬೆಲೆ ನೀಡುತ್ತಿಲ್ಲ. ಅವರಿಗೆ ಅವರದೇ ಸ್ವಾರ್ಥ ಲಾಭಗಳು ಇವೆ. ಅವರು ನೆನಪಿಟ್ಟುಕೊಳ್ಳಬೇಕು – ಅಲ್ಲಾಹನು ಒಂದು ಕಾಲಾವಧಿ ತನಕ ಮಾತ್ರವೇ ಕಾಲಾವಕಾಶ ನೀಡುತ್ತಾನೆ. ಅಲ್ಲದೇ ಇಹಲೋಕ ಮಾತ್ರವಲ್ಲ, ಪರಲೋಕವೂ ಇದೆ. ಈ

ಲೋಕದಲ್ಲೂ ಹಿಡಿಗೂಡಲ್ಪಡಬಹುದು. ಪರಲೋಕದಲ್ಲಿ ಅವರು ಖಂಡಿತ ಹಿಡಿಗೂಡಲ್ಪಡುವರು. ಹೇಗಿದ್ದರೂ ನಾವು ಪೀಡಿತ ಪೆಲಸ್ತೀನಿಯರಿಗಾಗಿ ಹೆಚ್ಚು ಹೆಚ್ಚು ದುಆ ಮಾಡಬೇಕು. ಅಲ್ಲಾಹನು ಅವರಿಗೆ ಈ ದೌರ್ಜನ್ಯಗಳಿಂದ ಮುಕ್ತಿ ನೀಡಲಿ – ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಎರಡು ಜನಾಝು ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.)

ಮೊದಲನೆಯದ್ದು ಹಮೀದುರ್ರಹ್ಮಾನ್ ಖ಼ಾನ್ ಸಾಹಿಬ್‌ರ ಪತ್ನಿಯಾದ ಮನ್ಸೂರ ಬಾಸಿಮ ಸಾಹಿಬರದ್ದಾಗಿದೆ. ಇವರು ಹಝ್ರತ್ ನವಾಬ್ ಅಬ್ದುಲ್ಲಾ ಖ಼ಾನ್ ಸಾಹಿಬ್ ಮತ್ತು ಹಝ್ರತ್ ಸಾಹಿಬ್‌ಝಾದಿ ಅಮತುಲ್ ಹಫೀಝ್ ಬೇಗಂ ಸಾಹಿಬ(ರ)ರ ಮೊಮ್ಮಗಳು ಹಾಗೂ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ) ಮತ್ತು ಹಝ್ರತ್ ಬೂರ್ಝ್ಯಾನಬ್ ಬೇಗಂ ಸಾಹಿಬ(ರ)ರ ಮಗಳ ಪುತ್ರಿಯೂ ಆಗಿದ್ದರು. ದಿವಂಗತರು ಮಿಯಾನ್ ಅಬ್ಬಾಸ್ ಅಹ್ಮದ್ ಖ಼ಾನ್ ಸಾಹಿಬ್ ಮತ್ತು ಅಮತುಲ್ ಬಾರಿ ಬೇಗಂ ಸಾಹಿಬರ ಪುತ್ರಿಯೂ ಆಗಿದ್ದರು. ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಇವರ ನಿಕಾಹಿನ ಸಂದರ್ಭದಲ್ಲಿ ಉಪದೇಶಿಸುತ್ತಾ ಹೀಗೆ ಹೇಳಿದ್ದರು: ನಿಕಾಹಿನ ಸಂದರ್ಭದಲ್ಲಿ ಪಠಿಸಲಾಗುವ **ಯಾ ಅಯ್ಯುಹನ್ನಾಸುತ್ತಖೂ ರಬ್ಬಕುಂ** ಎಂಬ ವಚನದಲ್ಲಿ 'ರಬ್ಬ್"ನ ತಖ್ವವನ್ನು ಕೈಗೊಳ್ಳಲು ಹೇಳಲಾಗಿದೆ. ಇದು ಸೂಚಿಸುವುದೇನೆಂದರೆ, ಯಾವ ರೀತಿಯಲ್ಲಿ ಅಲ್ಲಾಹನು ನಿಮ್ಮ ಪರಿಪಾಲನೆ ಮಾಡುತ್ತಾನೋ ಅದೇ ರೀತಿಯಲ್ಲಿ ಈಗ ನಿಮ್ಮ ಮೇಲೂ ಅಂತಹ ಹೊಣೆಗಾರಿಕೆ ಹಾಕಲಾಗುವುದು. ಅವುಗಳನ್ನು ನಿರ್ವಹಿಸಲಿಕ್ಕಾಗಿ ನೀವು ಕೂಡ ಪರಿಪಾಲನೆಯ ಗುಣದೊಂದಿಗೆ ದೇವಭಕ್ತಿಯನ್ನು ಕೈಗೊಳ್ಳಬೇಕು.

ದಿವಂಗತರು ಅಲ್ಲಾಹನ ಅನುಗ್ರಹಗಳ ಕೃತಜ್ಞತೆ ಅರ್ಪಿಸುವವರೂ, ಸತ್ಯಸಂಧರೂ, ನಮಾಝ್ ಮತ್ತು ಉಪವಾಸ ನಿಷ್ಠೆಯಿಂದ ನಿರ್ವಹಿಸುವವರೂ ಮತ್ತು ಖ಼ಿಲಾಫತನ್ನು ಗೌರವಿಸುವ ಮಹಿಳೆಯೂ ಆಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಎರಡನೆಯದು, ಫೈಸಲಾಬಾದಿನ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಮಾಜಿ ರೆಜಿಸ್ಟ್ರಾರ್ ಆದ ಚೌಧರಿ ರಶೀದ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಅವರ ಬಗ್ಗೆ ಪ್ರಸ್ತಾಪಿಸಿದ ನಂತರ ಹುಝೂರ್ ಹೇಳಿದರು: ಅಲ್ಲಾಹನು ಅವರೊಂದಿಗೆ ಮಗ್ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak',** Islamabad, Tilford, UK.* On 10-11-2023
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian


***Email**: khutuba.kannada@gmail.com*


**You can find all the Sermons archived at**: www.alislam.org/friday-sermon